ಎಲ್.ಎ.ಸಿ ನಂ: 397/2023
ಪಿ.ಡಬ್ಲೂ ನಂ: 01

ದಿನಾಂಕ: 28-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

## ಮುಖ್ಯ ವಿಚಾರಣೆ: ಅರ್ಜಿದಾರರ ಪರವಾಗಿ: -

ನಾನು ಈ ಪ್ರಕರಣದಲ್ಲಿ ಅರ್ಜಿದಾರನಿದ್ದು ನನ್ನ ಮುಖ್ಯ ವಿಚಾರಣೆಯಾಗಿ ಪ್ರಮಾಣಪತ್ರ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ. ನಾನು ಈ ಪ್ರಕರಣದಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ.

ಅರ್ಜಿದಾರರು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಯಾಗಿ ಗುರುತಿಸಲಾಯಿತು.

| ಅ.ನಂ. | ದಾಖಲೆಗಳ ವಿವರ | ನಿಶಾನೆ ಸಂಖ್ಯೆ |
|---|---|---|
| 1 | ದಿ: 22-02-2024 ರ ಪಟ್ಟಣ ಪಂಚಾಯತಿ ಕಾರ್ಯಾಲಯ, ಐನಾಪುರರವರು ನೀಡಿದ ಪತ್ರ | ನಿಪಿ-1 |
| 2 | ಡೈರಿ ನಂ.64 ರ ದೃಢೀಕೃತ ನಕಲು | ನಿಪಿ-2 |
| 3 | ಡೈರಿ ನಂ.64 ರ Typed copy | ನಿಪಿ-2 ಎ |
| 4 | ದಿ: 21-02-1992 ರ ಸರ್ವೆ ನಂ.269/1 ರಲ್ಲಿ ವಿಶೇಷ ಜಿಲ್ಲಾಧಿಕಾರಿಯವರು ನೀಡಿದ ಆದೇಶದ ದೃಢೀಕೃತ ನಕಲು | ನಿಪಿ-3 |
| 5 | ಡೈರಿ ನಂ.3644 ರ ದೃಢೀಕೃತ ನಕಲು | ನಿಪಿ-4 |
| 6 | ಡೈರಿ ನಂ.3644 ರ Typed copy | ನಿಪಿ-4 ಎ |
| 7 | ಡೈರಿ ನಂ.4239 ರ ದೃಢೀಕೃತ ನಕಲು | ನಿಪಿ-5 |
| 8 | ಡೈರಿ ನಂ.4239 ರ Typed copy | ನಿಪಿ-5 ಎ |
| 9 | ಡೈರಿ ನಂ.5401 ರ ದೃಢೀಕೃತ ನಕಲು | ನಿಪಿ-6 |
| 10 | ಡೈರಿ ನಂ.5401 ರ Typed copy | ನಿಪಿ-6 ಎ |
| 11 | ದಿ: 15-05-2004 ರ ಸರ್ವೆ ನಂ.262 ರಲ್ಲಿ ಜಿಲ್ಲಾಧಿಕಾರಿಯವರು ನೀಡಿದ ಆದೇಶದ ದೃಢೀಕೃತ ನಕಲು | ನಿಪಿ-7 |
| 12 | ಡೈರಿ ನಂ.5299 ರ ದೃಢೀಕೃತ ನಕಲು | ನಿಪಿ-8 |
| 13 | ಡೈರಿ ನಂ.5299 ರ Typed copy | ನಿಪಿ-8 ಎ |
| 14 | ದಿ: 05-01-1999 ರ ಸರ್ವೆ ನಂ.262 ರಲ್ಲಿ ಜಿಲ್ಲಾಧಿಕಾರಿಯವರು ನೀಡಿದ ಆದೇಶದ ದೃಢೀಕೃತ ನಕಲು | ನಿಪಿ-9 |
| 15 | ಡೈರಿ ನಂ.5361 ರ ದೃಢೀಕೃತ ನಕಲು | ನಿಪಿ-10 |

| | | |
|---|---|---|
| 16 | ಡೈರಿ ನಂ.5361 ರ Typed copy | ನಿಪಿ-10 ಎ |
| 17 | ದಿಃ 02-07-1984 ರ ಸರ್ವೆ ನಂ.264 ರಲ್ಲಿ ಜಿಲ್ಲಾಧಿಕಾರಿಯವರು ನೀಡಿದ ಆದೇಶದ ದೃಢೀಕೃತ ನಕಲು | ನಿಪಿ-11 |
| 18 | ಡೈರಿ ನಂ.948 ರ ದೃಢೀಕೃತ ನಕಲು | ನಿಪಿ-12 |
| 19 | ಡೈರಿ ನಂ.948 ರ Typed copy | ನಿಪಿ-12 ಎ |
| 20 | ದಿಃ 28-01-2016 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-13 |
| 21 | ದಿಃ 21-04-2017 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-14 |
| 22 | ದಿಃ 13-04-2017 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-15 |
| 23 | ದಿಃ 03-07-2017 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-16 |
| 24 | ದಿಃ 15-09-2017 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-17 |
| 25 | ದಿಃ 08-02-2016 ರ ಆಸ್ತಿ ನಂ.998 ಬಿ/2 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-18 |
| 26 | ದಿಃ 08-02-2016 ರ ಆಸ್ತಿ ನಂ.998 ಬಿ ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-19 |
| 27 | ದಿಃ 08-02-2016 ರ ಆಸ್ತಿ ನಂ.998 ಎ ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-20 |
| 28 | ದಿಃ 27-11-2017 ರ ಖರೀದಿ ಪತ್ರದ ಡಿಜಿಟಲ್ ಪ್ರತಿ | ನಿಪಿ-21 |
| 29 | ಕಲಂ 65(ಬಿ)ರಲ್ಲಿನ ಪ್ರಮಾಣಪತ್ರ | ನಿಪಿ-22 |
| 30 | 2 ಐನಾಪುರ ಗ್ರಾಮ ನಕಾಶೆ (ಟಿಕ್ಕಾ 1 ಮತ್ತು ಟಿಕ್ಕಾ 2) ಒಟ್ಟಾಗಿ | ನಿಪಿ-23 |

ಆ ಕಾರಣ ಅರ್ಜಿಯಲ್ಲಿ ಕೋರಿರುವಂತೆ ಹೆಚ್ಚಿನ ಬೆಲೆ ನಿಗದಿ ಮಾಡಬೇಕೆಂದು ಪ್ರಾರ್ಥನೆ.

**<u>ಪಾಟೀ ಸವಾಲುಃ ಮಾನ್ಯ ಡಿ.ಜಿ.ಪಿ ರವರಿಂದ 1 ನೇ ಎದುರುದಾರ ಪರಃ</u>**

ನನ್ನದು ಆಧಾರ ಕಾರ್ಡ ಇದ್ದು , ಅದನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ . ನನ್ನ ಮುಖ್ಯವಿಚಾರಣೆ ಪ್ರಮಾಣಪತ್ರದ ಮಾಹಿತಿ ನಾನೇ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲೆಗಳು ನಾನು ನೋಡಿರುತ್ತೇನೆ.

ಐನಾಪುರ ಇದು ಪಟ್ಟಣ ಪಂಚಾಯತಿ ವ್ಯಾಪ್ತಿಗೆ ಬರುವ ಹಳ್ಳಿ ಎಂದರೆ ಸರಿ. 2017 ರಲ್ಲಿ ಐನಾಪುರ ಇದು ಪಟ್ಟಣ ಪಂಚಾಯತಿ ಎಂದು ಘೋಷಣೆಯಾಗಿದೆ ಎಂದರೆ ಸರಿಯಲ್ಲ. 2015 ರಲ್ಲಿ ಘೋಷಣೆಯಗಿದೆ. ಅದಕ್ಕೂ ಮೊದಲು ಅದು ಗ್ರಾಮಪಂಚಾಯತಿಯಾಗಿತ್ತು ಎಂದರೆ ಸರಿ. ನಮ್ಮ ಜಮೀನಿನ ಉತಾರ ಲಭ್ಯವಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಜಮೀನಿನ ಉತಾರದಲ್ಲಿ ಸಂಪೂರ್ಣ ವಿವರವಿರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಉತಾರದಲ್ಲಿ ಜಮೀನಿನ ಸಂಪೂರ್ಣ ವಿವರವಿರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಉತಾರವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ಐನಾಪುರ ಇದು ಪಟ್ಟಣ ಪಂಚಾಯತಿ ಎಂದು 50 ವರ್ಷಗಳ ಹಿಂದೆಯೇ ಘೋಷಣೆಯಾಗಿದೆ ಎಂದು ವಕೀಲರ ಮುಂದೆ ಹೇಳಿಲ್ಲ. ಅದಕ್ಕೆ ಪುರಾವೆಗಳು ಇರುತ್ತವೆ. ಸದರಿ ಪುರಾವೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಮ್ಮ ಜವೀನು ಉಗಾರ ಸಕ್ಕರೆ ಕಾರ್ಖಾನೆಗೆ ಹತ್ತಿರವಾಗಿದೆ ಮತ್ತು ಐನಾಪುರ-ಉಗಾರ ಮುಖ್ಯರಸ್ತೆಗೆ ಹೊಂದಿಕೊಂಡಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಜಮೀನು ಕೆಂಪು ಮಣ್ಣಿನ ಜಮೀನು ಎಂದರೆ ಸರಿ. ನಮ್ಮ ಜಮೀನು ಸರ್ವೆ ನಂ.272/3 ಇರುತ್ತದೆ. ಒಟ್ಟು 1 ಎಕರೆ 28 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ನಮ್ಮ ಜಮೀನಿನ ಸುತ್ತಮುತ್ತ ವ್ಯವಸಾಯದ ಜಮೀನುಗಳು ಇರುತ್ತವೆ ಎಂದರೆ ಸರಿ. ನಮ್ಮ ಜಮೀನು ಮಳೆಯಾಶ್ರಿತ ಜಮೀನು ಎಂದರೆ ಸರಿ. ಐನಾಪುರ ಊರಿನಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಜಮೀನುಗಳು ಇರುತ್ತವೆ ಎಂದರೆ ಸರಿ. ಅದೇ ರೀತಿ ಆಯಾ ಭಾಗಕ್ಕೆ ತಕ್ಕಂತೆ ಬೆಲೆ ಇರುತ್ತದೆ ಎಂದರೆ ಸರಿ. ಐನಾಪುರ ಗ್ರಾಮಕ್ಕೆ ಹೊಂದಿಕೊಂಡ ಜಮೀನುಗಳ ಬೆಲೆ ಜಾಸ್ತಿ ಇರುತ್ತದೆ ಎಂದರೆ ಸರಿ. ನಿಪಿ-23 ನ್ನು ನಾನು ನೋಡಿರುತ್ತೇನೆ. ನಮ್ಮ ಜಮೀನು ಐನಾಪೂರ ಹದ್ದಿಯ ಕೊನೆಗೆ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ನ್ನು 22-02-2024 ರಂದು ಪಡೆದಿರುತ್ತೇನೆ ಎಂದರೆ ಸರಿ. ನಿಪಿ-1 ನ್ನು ಈ ಕೇಸಿನಲ್ಲಿ ಹಾಜರುಪಡಿಸುವ ಉದ್ದೇಶದಿಂದ ಪಡೆದಿರುತ್ತೇನೆ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ-2 ರಿಂದ 12 ಇವು ನಮ್ಮ ಜಮೀನಿಗೆ ಸಂಬಂಧಿಸಿಲ್ಲ ಎಂದರೆ ಸರಿ. ನಮ್ಮ ಅಕ್ಕಪಕ್ಕದ ಜಮೀನುಗಳಿಗೆ ಸಂಬಂಧಿಸಿವೆ. ನಿಪಿ-2 ರಿಂದ ನಿಪಿ-12 ಇವು ನಮ್ಮ ಅಕ್ಕಪಕ್ಕದ ಜಮೀನುಗಳಿಗೆ ಸಂಬಂಧಿವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಕಾಶೆಯನ್ನು

ಹಾಜರುಪಡಿಸಿರುತ್ತೇನೆ. ಸರ್ವೆ ನಂ.268, 269 ಇವು ಊರಿಗೆ ಹೊಂದಿಕೊಂಡ ಜಮೀನುಗಳು ಎಂದರೆ ಸರಿ. ನಿಪಿ-2 ರಿಂದ 12ರಲ್ಲಿನ ಜಮೀನುಗಳಿಗೆ ಮತ್ತು ನಮ್ಮ ಜಮೀನಿಗೂ ಬಹಳ ಅಂತರವಿದೆ ಎಂದರೆ ಸರಿಯಲ್ಲ. ಸರ್ವೆ ನಂ.269 ಇದು ಗೌಂಟಾನ ಜಾಗ ಎಂದರೆ ಸರಿ. ಸರ್ವೆ ನಂ.269 ಇದು ಗೌಂಟಾನ ಜಾಗವಾಗಿದ್ದರಿಂದ ಅದನ್ನು ಬೇರೆ ಬೇರೆ ಇಲಾಖೆಯವರಿಗೆ ಡಿಸಿಯವರು ಹಂಚಿಕೊಟ್ಟಿದ್ದಾರೆ ಎಂದರೆ ಸರಿ. ಹೆಚ್ಚಿನ ಪರಿಹಾರಕ್ಕಾಗಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ನಮ್ಮ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾ ಬಂದಿರುತ್ತೇವೆ. ನಮ್ಮ ಜಮೀನನ್ನು ಬಾಡಿಗೆ ಕೊಟ್ಟು ಪ್ರತಿ ವರ್ಷ 2-3 ಲಕ್ಷ ಆದಾಯ ಗಳಿಸುತ್ತಿದ್ದೆವು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

ನಿಪಿ-13 ರಿಂದ 21 ಇವು ನಿವೇಶನಗಳಿಗೆ ಸಂಬಂಧಿಸಿದ ಖರೀದಿ ಪತ್ರಗಳು ಎಂದರೆ ಸರಿ. ನಿಪಿ-13 ರಿಂದ 21ರಲ್ಲಿ ಸಂಬಂಧಿಸಿದ ಸರ್ವೆ ನಂಬರ ನಮೂದು ಇಲ್ಲ ಎಂದರೆ ಸರಿ. ನಿಪಿ-13 ರಿಂದ 21 ಇವು ಐನಾಪುರ ಊರಿನಲ್ಲಿನ ಆಸ್ತಿಗಳು ಎಂದರೆ ಸರಿ. ನಿಪಿ-13 ರಿಂದ 21ರಲ್ಲಿನ ಆಸ್ತಿಗಳು ಮನೆ ಕಟ್ಟುವ ಉದ್ದೇಶದಿಂದ ಖರೀದಿ ಮಾಡಿದ ಆಸ್ತಿಗಳು ಎಂದರೆ ಸರಿ. ನಿಪಿ-13 ರಿಂದ 21ರ ಆಸ್ತಿಗಳು ಐನಾಪುರ ಊರಿನೊಳಗೆ ಬರುವುದರಿಂದ ಅವುಗಳ ಬೆಲೆ ಹೆಚ್ಚಿವೆ ಎಂದರೆ ಸರಿ.

ದಿಃ 21-12-2017ರಂದು ಸರ್ಕಾರದವರು ಅಧಿಸೂಚನೆ ಹೊರಡಿಸಿರುತ್ತಾರೆ ಎಂದರೆ ಸರಿ. ಭೂಸ್ವಾಧೀನಕ್ಕಿಂತ ಮೊದಲು ಭೂಸ್ವಾಧೀನಾಧಿಕಾರಿಗಳು ನಮಗೆ ನೋಟಿಸ ನೀಡಿದ್ದರು ಎಂದರೆ ಸರಿಯಲ್ಲ. ನಂತರ ಭೂಸ್ವಾಧೀನಾಧಿಕಾರಿಗಳು ಮತ್ತು ನಿಗಮದವರು ಜಂಟಿ ಮೋಜಣಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪರಿಹಾರ ಕೊಡುವ ಮುಂಚೆ ನಮ್ಮ ಜಮೀನಿನ ಸ್ವರೂಪ , ಫಲವತ್ತತೆ, ನೀರಾವರಿ ಬಗ್ಗೆ ಮತ್ತು ಬೆಳೆಯುವ ಬೆಳೆಗಳ ಬಗ್ಗೆ ಪರಿಶೀಲನೆ ಮಾಡಿ ಪರಿಹಾರ ನಿಗದಿಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕೋಷ್ಟಕ 2ರಲ್ಲಿ ನಮೂದಿಸಿದ ಜಮೀನುಗಳು ನಮ್ಮ ಜಮೀನಿನ ಅಕ್ಕಪಕ್ಕದ ಜಮೀನುಗಳು ಎಂದರೆ ಸರಿ. ಕೋಷ್ಟಕ 2ರಲ್ಲಿ ನಮೂದಿಸಿದ ಜಮೀನು ಮತ್ತು ನಮ್ಮ ಜಮೀನುಗಳು ಒಂದೇ ರೀತಿಯ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಎಲ್ಲಿ ಬರುತ್ತವೆ ಎಂದು ನನಗೆ ಗೊತ್ತಿಲ್ಲ. ಕೋಷ್ಟಕ 2ರಲ್ಲಿ ನಮೂದಿಸಿದ ಜಮೀನುಗಳಿಗೆ ಸಂಬಂಧಿಸಿದಂತೆ 2014 ರಿಂದ 2017ರವರೆಗೆ ವ್ಯವಹಾರ ನಡೆದಿರುತ್ತವೆ ಎಂದರೆ ಸರಿ. ನಮ್ಮ ಜಮೀನಿನ ಅಕ್ಕಪಕ್ಕದ ಜಮೀನಿನ ಮಾರಾಟದ ಬೆಲೆಯ ಆಧಾರದ

ಮೇಲೆ ಭೂಸ್ವಾಧೀನಾಧಿಕಾರಿಗಳು ಪರಿಹಾರ ನಿಗದಿಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ್ವಾಧೀಪಡಿಸಿಕೊಳ್ಳುವಾಗ ಇರುವ ಬೆಲೆಗಿಂತ ಹೆಚ್ಚಿನ ಬೆಲೆ ನಿಗದಿಪಡಿಸಿ ಪರಿಹಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಭೂಸ್ವಾಧೀನಾಧಿಕಾರಿಗಳು ನೀಡಿದ ಪರಿಹಾರ ಸೂಕ್ತ ಮತ್ತು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ಭೂಸ್ವಾಧೀನ ಅಧಿಕಾರಿಗಳಿಂದ ನಿಗದಿ ಪಡಿಸಿದ ಪರಿಹಾರ ಹಣವನ್ನು ಪಡೆದುಕೊಂಡು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಮಾನ್ಯ ಡಿ ಬಿ ಟಿ ವಕೀರಿಂದ 2 ನೇ ಎದುರುದಾರ ಪರಃ**

ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖದ ಅನ್ವಯ ಬೆರಳಚ್ಚುಗಾರರು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿ ಪಡೆದುಕೊಳ್ಳಲಾಯಿತು)

ಓ ಹೇ ಕೆ ಸರಿ ಇದೆ.

(ಕುಡವಕ್ಕಲಿಗೇರ ಎಂ ಜಿ)
1 ನೇ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ
ನ್ಯಾಯಾಧೀಶರು, ಬೆಳಗಾವಿ.